<table>
<tr><td colspan="4">ಕರ್ನಾಟಕ ಸರ್ಕಾರ<br>(ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ. 4609/2022</td></tr>
<tr><td></td><td>ಸಿ.ಡಬ್ಲೂ</td><td>7</td></tr>
<tr><td></td><td>ಪಿ.ಡಬ್ಲೂ</td><td>6</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ಅನುಷಾ.ಎಂ ಬಿನ್ ಮಹದೇವಯ್ಯ</td></tr>
<tr><td>ವಯಸ್ಸು</td><td colspan="3">34 ವರ್ಷ</td></tr>
<tr><td>ಉದ್ಯೋಗ</td><td colspan="3">ಶಿರಸ್ತೇದಾರರು ಆಹಾರ ಇಲಾಖೆ ಆನೇಕಲ್ ತಾಲ್ಲೂಕು</td></tr>
<tr><td>ವಾಸಸ್ಥಳ</td><td colspan="3">ಬೆಂಗಳೂರು</td></tr>
</table>

ದಿನಾಂಕಃ **15.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**1)** ನಾನು **2019** ರಿಂದ **2022** ರವರೆಗೆ ಚನ್ನಪಟ್ಟಣ ತಾಲ್ಲೂಕಿನ ಆಹಾರ ನಾಗರಿಕ ಸರಬರಾಜು ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ಮಾಡಿರುತ್ತೇನೆ.

**2)** ದಿ.**06.03.2022** ರಂದು ಬೆಳಗಿನ ಜಾವ **05.30** ರ ಸಮಯದಲ್ಲಿ ಚನ್ನಪಟ್ಟಣದ ಗ್ರಾಮಾಂತರ ಪೋಲಿಸ್ ಠಾಣೆಯ ಪೋಲಿಸರು ಚನ್ನಪಟ್ಟಣ ತಾಲ್ಲೂಕಿನ ಚಿಕ್ಕಮಾಳೂರು ಬಳಿ ಇರುವ ಬಿ.ಎಂ. ರಸ್ತೆಯ ಮೇಲೆ ಪಡಿತರ ಚೀಟಿಯಲ್ಲಿ ವಿತರಿಸುವ ಅಕ್ಕಿಯನ್ನು ಕೆಎ **42** ಎ **5236** ನೇದ್ದರ ಟಾಟಾ ಎಸ್ ವಾಹನದಲ್ಲಿ ತೆಗೆದುಕೊಂಡು ಹೋಗುವಾಗ ಹಿಡಿದು ನಿಲ್ಲಿಸಿ ಪ್ರಕರಣ ದಾಖಲಿಸಿಕೊಂಡಿರುವುದಾಗಿ ನನಗೆ ಅದೇ ದಿನ ಬೆಳಿಗ್ಗೆ **10.30** ರ ಸಮಯದಲ್ಲಿ ಮಾಹಿತಿ ನೀಡಿದ್ದರು. ನಂತರ ನಾನು ಮತ್ತು ಆಹಾರ ಪರೀಕ್ಷಾ ಅಧಿಕಾರಿ ಚೇತರ್ ರವರು ಚಿಕ್ಕಮಾಳೂರು ಗ್ರಾಮದ ಬಳಿಗೆ ಹೋಗಿ ಅಲ್ಲಿ ಪೋಲಿಸರು ಹಿಡಿದಿದ್ದ ವಾಹನ ಮತ್ತು ಅದರಲ್ಲಿನ ಅಕ್ಕಿ ಮೂಟೆಗಳನ್ನು ಪರಿಶೀಲನೆ ಮಾಡಿದ್ದೆವು. ನಾವು ಸದರಿ ಅಕ್ಕಿಯನ್ನು ಪರಿಶೀಲಿಸಿದಾಗ ಅವು ಪಡಿತರ ಚೀಟಿ ಮೇರೆಗೆ ವಿತರಣೆ ಮಾಡುವ ಅಕ್ಕಿ ಆಗಿರುವುದಾಗಿ ಮೇಲ್ನೋಟಕ್ಕೆ ಕಂಡು ಬಂದಿತ್ತು. ನಂತರ ಸ್ಥಳದಲ್ಲಿ ನಮ್ಮ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದರು. ತದನಂತರ ನಾವು ಸ್ಥಳದಿಂದ ಹೊರಟು ಹೋದೆವು. ದಿಃ**28.03.2022** ರಂದು **57** ಅಕ್ಕಿಯ ಮೂಟೆಗಳನ್ನು ನಮ್ಮ ಇಲಾಖೆಯ ವಶಕ್ಕೆ ನೀಡಿದ್ದರು. ಕೆಎ **42** ಎ **5236** ನೇದ್ದರ ಟಾಟಾ ಎಸ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವಾಹನದ ಎರಡು ಭಾವಚಿತ್ರಗಳನ್ನು ನೋಡಿ

ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.**4** ಮತ್ತು **5** ಎಂದು ಗುರುತಿಸಲಾಯಿತು. ಸದರಿ ವಾಹನವನ್ನು ಆ ದಿನ ಯಾರು ಚಾಲನೆ ಮಾಡುತ್ತಿದ್ದರು ಎಂಬ ಬಗ್ಗೆ ನಾನು ನೋಡಿರುವುದಿಲ್ಲ. ಸದರಿ ವಾಹನವನ್ನು ಕುಮಾರ್ ಎಂಬ ವ್ಯಕ್ತಿ ಚಾಲನೆ ಮಾಡಿಕೊಂಡು ಬಂದಿದ್ದರು ಎಂದು ಪೋಲಿಸರು ನನಗೆ ತಿಳಿಸಿದ್ದರು.

**ಮರುವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂ.ಕೆ.ಎನ್. ವಕೀಲರಿಂದ</u>**

**1)** ಈ ಪ್ರಕರಣದ ಕುರಿತು ನನಗೆ ಬೆಳಿಗ್ಗೆ **10.30** ಕ್ಕೂ ಮೊದಲೇ ಮಾಹಿತಿಯನ್ನು ಪೋಲಿಸರು ನೀಡಿರಲಿಲ್ಲ. ನಮ್ಮ ಇಲಾಖಾ ವ್ಯಾಪ್ತಿಗೆ ಒಳಪಡುವ ನ್ಯಾಯಬೆಲೆ ಅಂಗಡಿಯಲ್ಲಿ ಸರಿಯಾಗಿ ಅಕ್ಕಿಯನ್ನು ವಿತರಣೆ ಮಾಡುತ್ತಿಲ್ಲ ಎಂಬುದಾಗಿ ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಯಾವುದೇ ರೀತಿಯ ದೂರುಗಳು ಬಂದಿರಲಿಲ್ಲ. ನಮ್ಮ ಇಲಾಖೆಯಿಂದ ಅಕ್ಕಿ ವಿತರಣೆ ಮಾಡುವ ಸಂಬಂಧ ಅಕ್ಕಿಯನ್ನು ಗೋಣೀ ಚೀಲದಲ್ಲಿ ಹಾಕಿ ಆದರ ಮೇಲೆ ನಮ್ಮ ಇಲಾಖೆಯ ಲೋಗೋ ಸಹ ಹಾಕುತ್ತಾರೆ. ಸರ್ಕಾರದ ವತಿಯಿಂದ ನಿಗದಿತ ಮಾದರಿಯ ಅಕ್ಕಿಯನ್ನು ಮಾತ್ರ ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆ ಮಾಡುತ್ತಾರೆ. ನಾನು ಆ ದಿನ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದ ವೇಳೆಗೆ ಸರ್ಕಾರದ ವತಿಯಿಂದ ವಿತರಣೆ ಮಾಡುವ ಗೋಣೀಚೀಲ ಮತ್ತು ಅದರ ಮೇಲೆ ಇರಬೇಕಾದ ಲೋಗೋ ಯಾವುದೂ ಅಲ್ಲಿ ಇರಲಿಲ್ಲ.

**2)** ಸ್ಥಳದಲ್ಲಿ ನಾವು ಪರಿಶೀಲನೆ ಮಾಡಿದ ಅಕ್ಕಿಯು ಸರ್ಕಾರದ ವತಿಯಿಂದ ನ್ಯಾಯಬೆಲೆ ಅಂಗಡಿಗೆ ವಿತರಣೆ ಮಾಡುವ ಅಕ್ಕಿ ಆಗಿತ್ತೇ ಎಂಬ ಬಗ್ಗೆ ಆ ಅಕ್ಕಿಯನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಿ ಮಾಹಿತಿಯನ್ನು ಪಡೆದಿರುವುದಿಲ್ಲ. ನಾನು ಸದರಿ ಅಕ್ಕಿಯನ್ನು ಪರಿಶೀಲನೆ ಮಾಡಲು ನಿಖರವಾಗಿ ಇಲಾಖಾ ವತಿಯಿಂದ ಯಾವುದೇ ತರಭೇತಿ ಇರುವುದಿಲ್ಲ. ಅಕ್ಕಿಯ ನೈಜತೆಯ ಬಗ್ಗೆ ಪರಿಶೀಲನೆ ಮಾಡಲು ಸಂಬಂಧಪಟ್ಟ ಎಫ್.ಸಿ.ಐ ನಲ್ಲಿ ಅಧಿಕಾರಿಗಳು ಇರುತ್ತಾರೆ. ನನಗೆ ಪೋಲಿಸರು ಘಟನೆಯ ಸಂಬಂಧ ಬೆಳಿಗ್ಗೆ **10.30** ರಲ್ಲಿ ಯಾವುದೇ ಮಾಹಿತಿ ನೀಡಿಲ್ಲ, ನಾನು ಮತ್ತು ನನ್ನ ಸಹೋದ್ಯೋಗಿ ಚೇತನ್ ರವರು ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ, ನಾವು ಸ್ಥಳದಲ್ಲಿ ಯಾವುದೇ ವಾಹನವನ್ನು ನೋಡಿಲ್ಲ ಮತ್ತು ನಮ್ಮ ಸಮಕ್ಷಮ ಪೋಲಿಸರು ನಾನು ಹೇಳಿದಂತೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸದರಿ ವಾಹವನ್ನು ಕುಮಾರ್ ಎಂಬ ವ್ಯಕ್ತಿ ಚಾಲನೆ

ಮಾಡಿಕೊಂಡು ಬಂದಿದ್ದಾಗಿ ನನಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ